ದಿನಾಂಕಃ 17-04-2023 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು ಪ್ರತಿವಾದಿ ಪರ ವಕೀಲರಾದ ಶ್ರೀ. ಟಿ.ಎನ್. ಎಸ್. ವಕೀಲರಿಂದ

ಇದೆ ನ್ಯಾಯಾಲಯದಲ್ಲಿ ಇದೆ ದಾವಾ ಆಸ್ತಿಯ ಮೇಲೆ ಅಸಲು ದಾವೆ ಸಂಖ್ಯೆ **223/2010** ರಲ್ಲಿ ಶಾಶ್ವತ ನಿರ್ಬಂಧಕಾಜ್ಞೆ ಕೋರಿ ಈ ದಾವೆಯ ಪ್ರತಿವಾದಿಗಳು ಮತ್ತು ಹರೀಶ್ ಎಂಬುವರ ಮೇಲೆ ದಾವೆ ಸಲ್ಲಿಸಿರುತ್ತೀರಾ ಎಂದರೆ ಸರಿ. ಈ ದಾವೆಯಲ್ಲಿ ಹಾಜರು ಪಡಿಸಿರುವ ಎಲ್ಲಾ ದಾಖಲೆಗಳು ಓ ಎಸ್ ನಂ. **223/2010** ರಲ್ಲಿಯೂ ಹಾಜರು ಪಡಿಸಿರುತ್ತೀರಾ ಎಂದರೆ ಸರಿ. ಆ ದಾವೆಯಲ್ಲಿ ನಿಮ್ಮ ಸಾಕ್ಷಿಗಳು ಮತ್ತು ಪ್ರತಿವಾದಿಗಳ ಸಾಕ್ಷ್ಯ ವಿಚಾರಣೆ ಆಗಿರುತ್ತದೆ ಎಂದರೆ ಸಾಕ್ಷಿಯು ಪ್ರತಿವಾದಿಗಳ ಸಾಕ್ಷ್ಯ ವಿಚಾರಣೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ಈ ನ್ಯಾಯಾಲಯವು ಆ ದಾವ ಸ್ವತ್ತನ್ನು ನೀವು ಹಕ್ಕು ಸ್ವಾಧೀನ ಇಲ್ಲ ಅಂತಾ ಹೇಳಿ ಆ ದಾವೆಯನ್ನು ವಜಾ ಮಾಡಿರುತ್ತದೆ ಎಂದರೆ ಸಾಕ್ಷಿಯು ವಜಾ ಆಗಿದೆ ಅದು ಏನು ಎಂದು ಗೊತ್ತಿರುವುದಿಲ್ಲ. ಆ ದಾವಾ ತೀರ್ಪಿನ ಮೇಲೆ ಆರ್ ಎ ನಂ. **79/2018** ರ ಮೇಲ್ಮನವಿಯನ್ನು ಮಾನ್ಯ ವುರಿಯ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತೀರಾ . ಆ ಮೇಲ್ಮನವಿ ಇನ್ನು ಇತ್ಯರ್ಥದಲ್ಲಿ ಇದೆ ಎಂದರೆ ಸರಿ.

ಈ ದಾವೆ ಸಲ್ಲಿಸುವಾಗ ನಾನು ನಮ್ಮ ವಕೀಲರಿಗೆ ನಾನು ಮೊದಲು ಹಾಕಿದ ದಾವೆಯ ಬಗ್ಗೆ ಹಾಗೂ ಅದು ವಜಾ ಆಗಿರುವ ಬಗ್ಗೆ ಮತ್ತು ಮೇಲ್ಮನವಿ ಇರುವ ಬಗ್ಗೆ ತಿಳಿಸಿರುತ್ತೇನೆ. ಆ ಎಲ್ಲಾ ದಾಖಲೆಗಳನ್ನು ನಾನು ವಕೀಲರಿಗೆ ಕೊಟ್ಟಿರುತ್ತೇನೆ. ನಮ್ಮ ವಕೀಲರು ಮೊದಲು ಹಾಕಿದ ದಾವೆಯ ಬಗ್ಗೆ ಹಾಗೂ ಅದು ವಜಾ ಆಗಿರುವ ಬಗ್ಗೆ ಮತ್ತು ಮೇಲ್ಮನವಿ ಇರುವ ಬಗ್ಗೆ ತಿಳಿಸಿರುತಾರೆ ಎಂಬುದನ್ನು ತಿಳಿದುಕೊಂಡಿರುತ್ತೇನೆ. ಅಸಲು ದಾವೆ ಸಂಖ್ಯೆ **223/2010** ರ ಆದೇಶದ ಪ್ರತಿ, ವಾದ ಪತ್ರ, ಪ್ರತಿವಾದ ಪತ್ರ , ತೀರ್ಪಿನ ಪ್ರತಿ, ಡಿಕ್ರಿ ಪ್ರತಿ,

ವಾದಿ ಮತ್ತು ಪ್ರತಿವಾದಿಗಳ ಸಾಕ್ಷಿ ವಿಚಾರಣೆಯ , ದಾಖಲಾತಿಗಳ ದೃಢೀಕೃತಿ ಪ್ರತಿಗಳನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಡಿ 1 ಎಂದು, ಆರ್ ನಂ. 79/2018 ರ ಆದೇಶದ ದೃಢೀಕೃತ ನಕಲನ್ನು ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಮೊದಲು ನಡೆದಿರುವ ಎಲ್ಲಾ ವಿಷಯಗಳನ್ನು ಮುಚ್ಚಿಟ್ಟು ಸುಳ್ಳು ಪ್ರಕರಣವನ್ನು ದಾಖಲು ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಈ ದಾವಾ ಆಸ್ತಿಯಲ್ಲಿ ನಿಮಗೆ ಯಾವುದೇ ಹಕ್ಕು , ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ. ನನ್ನನ್ನು ಜುಂಜನಹಳ್ಳಿಗೆ ಕೊಟ್ಟು ಮದುವೆ ಮಾಡಿರುತ್ತಾರೆ. ಮೊದಲು ದಾವೆ ಸಲ್ಲಿಸಿದ ಮುನಿಯಮ್ಮ ನನ್ನ ತಾಯಿ. ಶ್ರೀರಾಮಪ್ಪ ನನ್ನ ಅಣ್ಣ. ಹರೀಶ್ ನನ್ನ ಅಳಿಯ(ಅಣ್ಣನ ಮಗ). 30 ವರ್ಷಗಳಿಂದ ಆಗಾಗ ಪ್ರತಿವಾದಿಗಳು ನನ್ನ ಸ್ವಾಧೀನಕ್ಕೆ ತಕರಾರು ಮಾಡುತ್ತಿರುತ್ತಾರೆ. ನನ್ನ ಮದುವೆಯಾಗಿ 45 ವರ್ಷ ಆಗಿರುತ್ತದೆ. 30 ವರ್ಷದ ಹಿಂದೆ ಗ್ರಾಮ ಠಾಣೆಯವರು ಬಂದು ಅಳತೆ ಮಾಡಿ ನಮಗೆ ಸ್ವತ್ತನ್ನು ಕೊಟ್ಟಿರುತ್ತಾರೆ. ಅಸೆಸ್ಮೆಂಟ್, ಪರವಾನಿಗೆ , ಕಂದಾಯ ರಸೀದಿಯನ್ನು ಕೊಟ್ಟಿರುತ್ತಾರೆ. 30 ವರ್ಷದ ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ . ಇನ್ನೂ ಕಮ್ಮಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತೇನೆ. ಆ ದಾಖಲೆಗಳನ್ನು ಸಿಗದೆ ಇರುವ ಕಾರಣ ಕೊಟ್ಟಿರುವುದಿಲ್ಲ. ಪಂಚಾಯ್ತಿಗೆ ಸೇರಿದ ಯಾವ ದಾಖಲೇಯನ್ನು ಕೊಟ್ಟಿರುತ್ತೀರಾ ಎಂದರೆಸ ಸಾಕ್ಷಿಯು ಪಂಚಾಯ್ತಿಗೆ ಸೇಗರಿತ್ತೊ ಇಲ್ಲವೋ ಕೊಟ್ಟಿರುತ್ತೇನೆ. ದಾವಾ ಆಸ್ತಿಯು ಪಂಚಾಯ್ತಿಗೆ ಸೇರಿರುವುದಿಲ್ಲ ಎಂದರೆ ಸರಿಯಲ್ಲ. ಯಾವುದೇ ಪಂಚಾಯ್ತಿ ದಾಖಲೆಯನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಅರಳಿ ಮರ ದಾವಾ ಆಸ್ತಿಯಲ್ಲಿಯೇ ಇರುತ್ತೇ. ನಾನು ಕೇಸ್ ಗೆ ಕೊಟ್ಟಿರುವ ದಾಖಲೆಯನ್ನು ನೋಡಿರುತ್ತೇನೆ. ಆ ಪತರದ ಪ್ರಕಾರ ನನ್ನ ತಾಯಿ 8 ಗುಂಟೆ ಕಂದಾಯ 3 ಗುಂಟೆ ಖರಾಬು. ಆ ಪತ್ರದ ಪ್ರಕಾರ ಚೆಕ್ಕುಬಂದಿ ದಕ್ಷಿಣಕ್ಕೆ ಚಿಕ್ಕನಾರಾಯಣಪ್ಪ , ಉತ್ತರಕ್ಕೆ ಗಂಜೂರು ಮುನಿವೆಂಕಟಪ್ಪ ನವರ ತಾತ ಮುನಿಸ್ವಾಮಿ, ಪೂರ್ವಕ್ಕೆ ನೆನಪಿರುವುಲ್ಲ , ಪಶ್ಚಿಮಕ್ಕೆ

ಚಿಕ್ಕನಾರಾಯಣಪ್ಪ ನವರ ಮನೆ. ನಾನು ಹಾಕಿರುವ ದಾವಾ ಆಸ್ತಿಯು ಚಿಕ್ಕನಾರಾಯಣಪ್ಪ ನವರ ಪೂರ್ವದ ಕಡೆ ಬರುತ್ತದೆ. ದಾವಾ ಆಸ್ತಿಯು ನಿಮ್ಮ ತಾಯಿ ಖರೀದಿ ಮಾಡಿರುವ ಸರ್ವೆ ನಂ. **2/2** ರಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಅದು ಗ್ರಾಮ ಠಾಣಾದ ಆಸ್ತಿ ಎಂದು ನುಡಿಯುತಾರೆ. ಗ್ರಾಮ ಠಾಣಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಯಾವುದೇ ದಾಖಲೆ ಇರುವುದಿಲ್ಲ. ನನ್ನ ತಾಯಿ ಸರ್ವೆ ನಂ. **2/2** ರಲ್ಲಿ ನನಗೆ **2** ಗುಂಟೆ , ಮುನಿದಾಸಪ್ಪನಿಗೆ **2** ಗುಂಟೆ , ಕೃಷ್ಣಮ್ಮನಿಗೆ **2** ಗುಂಟೆ , ಶ್ರೀರಾಮಪ್ಪನಿಗೆ **2** ಗುಂಟೆ ಒಟ್ಟು ನಾಲ್ಕು ಪತ್ರ ಗಳು ಒಂದೇ ದಿನ ಆಗಿರುತ್ತವೆ . **2** ಲಗುಂಟೆ ಜಮೀನು ಬರೆದುಕೊಟ್ಟ ಪತ್ರ ನನ್ನ ಬಳಿ ಇರುತ್ತದೆ. ನನಗೆ ಬರೆದುಕೊಟ್ಟ **2** ಗುಂಟೆ ಜಮೀನಿನ ಚೆಕ್ಕು ಬಂದಿ ಪೂರ್ವಕ್ಕೆ **2/8,** ಪಶ್ಚಿಮಕ್ಕೆ ಮುನಿದಾಸಪ್ಪ , ದಕ್ಷಿಣಕ್ಕೆ ಚಿಕ್ಕನಾರಾಯಣಪ್ಪ , ಉತ್ತರಕ್ಕೆ ನನ್ನದೆ ಜಮೀನು. ಆ ಚೆಕ್ಕುಬಂದಿ ಇರುವ ಪತ್ರ ವನ್ನು ನಾನು ನ್ಯಾಯಾಲಯಕ್ಕೆ ಕೊಡುತ್ತೇನೆ. ದಿಃ **23-01-2002** ರಲ್ಲಿ ಪ್ರತಿವಾದಿಯ ತಂದೆ ಶ್ರೀರಾಮಪ್ಪನವರಿಗೆ ನಿಮ್ಮ ತಾಯಿ **3 ¾** ಗುಂಟೆ ಜಮೀನು ಬರೆದುಕೊಟ್ಟಿದ್ದು ಅದರಲ್ಲಿ **1 ¾** ಗುಂಟೆ ಖರಾಬು ಎಂದರೆ ಸರಿಯಲ್ಲ. **23-02-2002** ರಲ್ಲಿ ಶ್ರೀರಾಮಪ್ಪ ನವರಿಗೆ ಬರೆದುಕೊಟ್ಟ ಪತ್ರ ವನ್ನು ನಾನು ನೋಡಿರುವುದಿಲ್ಲ ಅದರಲ್ಲಿ ಚೆಕ್ಕುಬಂದಿ ಬರೆದಿರುವುದನ್ನು ನಾನು ನೋಡಿರುವುದಿಲ್ಲ. ನೀವು ಮೊದಲು ಹಾಕಿದ ದಾವೆಯಲ್ಲಿ ಆ ದಾವ ಆಸ್ತಿಯು ಶ್ರಿರಾಮಪ್ಪ ನವರು ಖರೀದಿ ಮಾಡಿದ ಆಸ್ತಿಯಲ್ಲಿ ಬರುತ್ತದೆ ಅಂತಾ ಹೇಳಿ ವಜಾ ಆಗಿರುತ್ತದೆ ಎಂದರೆ ಗೊತ್ತಿರುವುದಿಲ್ಲ. ಆ ಪತ್ರ ಕ್ಕೆ ನೀವು ಸಹ ಸಹಿ ಹಾಕಿರುತ್ತೀರಾ ಎಂದರೆ ಸಹಿ ಹಾಕಿರುತ್ತೇನೆ ಆದರೆ ಅದರಲ್ಲಿ ಎನು ಬರೆದಿದೆ ಎಂದು ಗೊತ್ತಿರುವುದಿಲ್ಲ. ಅರಳಿ ಮರ ಆ ದಾವೆ ಆಸ್ತಿಯಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಅದು ನನಗೆ ಗೊತ್ತಿರುವುದಿಲ್ಲ. ನೀವು ಹಾಜರು ಪಡಿಸಿರುವ ದಾಖಲೆಗಳಲ್ಲಿ ನೀವು ಹಕ್ಕು , ಸ್ವಾಧೀನ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ಮದುವೆಯಾದ ನಂತರ ನಿಮ್ಮ ತಾಯಿ ಕೊಟ್ಟಿರುವ ಆಸ್ತಿಯನ್ನು ಹೊರತು

ಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯ ಮೇಲೆ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೀರಾ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.